**ಸಿ.ಸಿ. ಸಂ. 616/2014**

**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ.**

***ಅಸಾ-5 (ಚಾಸಾ-8)***

| | | |
|---|---|---|
| ಹೆಸರು | : | ಅಜಯ ಗಣಾಚಾರಿ |
| ತಂದೆಯ / ಗಂಡನ ಹೆಸರು | : | ಪರಶುರಾಮ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ ಸ್ಥಳ | : | ರಬಕವಿ |

ದಿನಾಂಕ: 01-02-2023 ರಂದು ಸಾಕ್ಷಿ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಚಾಸಾ 1, 4 ಮತ್ತು 5 ಇವರ ಪರಿಚಯ ನನಗೆ ಇದೆ. ಆರೋಪಿತರ ಪರಿಚಯ ನನಗೆ ಇಲ್ಲ. ರಬಕವಿಯ ಸನಕಲ್ ರಸ್ತೆಯಲ್ಲಿ ನನ್ನ ಒಂದು ಬಾಂಡೆ ಅಂಗಡಿ ಇರುತ್ತದೆ. ನಮ್ಮ ಅಂಗಡಿಯ ಎಡಗಡೆ ಬಾಜು ನಜೀರ್ ಅತ್ತಾರ ಇವರ ಕಿರಾಣಿ ಅಂಗಡಿ ಇರುತ್ತದೆ. ನನ್ನ ಅಂಗಡಿಯ ಎದುರುಗಡೆ ಚಾಸಾ 1 ಇವರ ಕಿರಾಣಿ ಅಂಗಡಿ ಇರುತ್ತದೆ. ಕಳೆದ 2 ವರ್ಷಗಳ ಹಿಂದೆ ಚಾಸಾ 1 ಇವರ ಅಂಗಡಿಯ ಮುಂದೆ ಕಿರಾಣಿಯ ಸಾಮಾನುಗಳು ಬಿದ್ದಿದ್ದವು. ಸದರಿ ಸಾಮಾನುಗಳು ಯಾವ ಕಾರಣಕ್ಕೆ ಬಿದ್ದಿರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರ ಮೇಲೆ ಏನು ಪ್ರಕರಣ ದಾಖಲಾಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ವಿನಂತಿಸಿದ್ದರಿಂದ ಅನುಮತಿಸಲಾಯಿತು.)

**ಪಾಟೀ ಸವಾಲು : ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನಮ್ಮ ಅಂಗಡಿಯ ಎದುರಿಗೆ ಚಾಸಾ 1 ಇವರ ಅಂಗಡಿ ಇದ್ದು ಅವರು ಬಹಳ ವರ್ಷಗಳಿಂದ ಸದರಿ ಅಂಗಡಿಯ ಕಬ್ಜಾದಲ್ಲಿದ್ದು ಸದರಿ ಅಂಗಡಿಯ ಮೂಲ ಮಾಲೀಕರಾದ ಮೋಹನ ಉಮದಿ ಮತ್ತು ಚಾಸಾ 1 ಇವರ ಮಧ್ಯೆ ಕೋರ್ಟನಲ್ಲಿ ನ್ಯಾಯ ನಡೆದ ಸಂಗತಿ ಮತ್ತು ಸದರಿ ಅಂಗಡಿಯನ್ನು ಉಮದಿಯವರು 1 ನೇ ಆರೊಪಿತನಿಗೆ ಖರೀದಿ ಕೊಟ್ಟ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಅಲ್ಲದೇ

**<u>ಸಿ.ಸಿ. ಸಂ. 616/2014</u>**

ದಿಃ 08-12-2013 ರಂದು ಬೆಳಿಗ್ಗೆ 8 ಗಂಟೆಗೆ ನಾನು ನನ್ನ ಅಂಗಡಿ ತೆರೆಯಲು ಬಂದಾಗ ಚಾಸಾ 1 ಇವರ ಕಿರಾಣಿ ಅಂಗಡಿಯ ಹೊರಗೆ ಕಿರಾಣಿ ಸಾಮಾನುಗಳು ಬಿದ್ದಿದ್ದು, ಅಲ್ಲಿ ಆರೊಪಿತರೆಲ್ಲರೂ ಇದ್ದು ಸದರಿ ಅಂಗಡಿಗೆ ಕೀಲಿ ಹಾಕಿದ್ದನ್ನು ನೋಡಿದ್ದೆ. ನಂತರ ಬೆಳಿಗ್ಗೆ 9 ಗಂಟೆಗೆ ಚಾಸಾ 1 ಮತ್ತು ಅವನ ತಮ್ಮ, ಅವನ ಹೆಂಡತಿ ಇವರೆಲ್ಲರೂ ಕೂಡಿ ಬಂದು ತಮ್ಮ ಅಂಗಡಿಯ ಹತ್ತಿರ ಬಂದು ಅಲ್ಲಿದ್ದ ಆರೋಪಿತರನ್ನು ಉದ್ದೇಶಿಸಿ ಯಾಕೆ ನಮ್ಮ ಅಂಗಡಿಯ ಕಿರಾಣಿ ಸಮಾನುಗಳನ್ನು ಹೊರಗೆ ಇಟ್ಟಿದ್ದೀರಿ ಅಂತಾ ಕೇಳಿದಾಗ ಅವರೆಲ್ಲಾ ನಮ್ಮ ಅಂಗಡಿ, ನಿವೇನೂ ಕೇಳುತ್ತೀರಿ ಅಂತಾ ಅವಾಚ್ಯ ಶಬ್ದದಿಂದ ಬೈಯ್ದು ಜೀವ ಬೆದರಿಕೆ ಹಾಕಿರುತ್ತಾರೆ ಅಲ್ಲದೆ ಸದರಿ ಅಂಗಡಿಗೆ ಅಕ್ರಮ ಪ್ರವೇಶ ಮಾಡಿ ಅವಾಚ್ಯ ಶಬ್ದದಿಂದ ಬೈಯ್ದಿರುತ್ತಾರೆ ಎಂದು ಹೇಳಿ ನಾನು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ಸಾಕ್ಷಿಗೆ ಓದಿ ಹೇಳಲಾಗಿ ಸಾಕ್ಷಿ ಅದನ್ನು ನಿರಾಕರಿಸಿದ್ದರಿಂದ ಸದರಿ ಹೇಳಿಕೆಯ ಭಾಗವನ್ನು ನಿಪಿ 7 ಎಂದು ಗುರುತಿಸಲಾಯಿತು. ನಿಪಿ 7 ರಲ್ಲಿರುವ ಎಲ್ಲಾ ಸಂಗತಿಗಳು ಗೊತ್ತಿದ್ದರೂ ಸಹ ಆರೊಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : ಆರೋಪಿತರ ಪರ ಶ್ರೀ ಎಸ್ ವಿ ಜಿ ವಕೀಲರಿಂದ</u>**

ಏನೂ ಇಲ್ಲ

**<u>ಮರು ವಿಚಾರಣೆ :</u>**

ಏನೂ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು.)

ಓದಿ ಹೇ. ಕೇ. ಸರಿ ಅದೆ

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ .

**ಸಿ.ಸಿ. ಸಂ. 616/2014**

**<u>ಸಿ.ಸಿ. ಸಂ. 616/2014</u>**